ಮೇಲೆ ಅವಳ ಕಾಲ ಬಳಿ ಕುಳಿತ, ಹಾಗೇ ಮಡಿಲಲ್ಲಿ ಮುಖವಿರಿಸಿ ಬಿಕ್ಕಿದ. ಅಮ್ಮ ಮಾತಾಡದೆಯೆ ತಲೆ ನೇವರಿಸಿದಳು. ಕ್ಷಣ ಕಳೆದ ಮೇಲೆ ಸಮಾಧಾನಿಸಿಕೊಂಡು ಅಮ್ಮನ ಕೈಲಿದ್ದ ಕವರ್ ತೆಗೆದುಕೊಂಡು ನೋಡಿದ. ಕಣ್ಣು ಅಗಲಿಸಿ ಓದಿದ. ಇದು ತನಗೆ ಗೊತ್ತೇ ಇಲ್ಲ... ಯಾವಾಗ ಈ ಅಪ್ಪನ ಜೊತೆಗೆ ಅಮ್ಮನೂ ಇಂಥಾ ನಿರ್ಧಾರ ತೆಗೆದುಕೊಂಡದ್ದು? ಅದೂ ತನಗಾಗಲಿ ರಾಶಿಗಾಗಲಿ ಸುಳಿವನ್ನೂ ಕೊಡದೆ? ಅಪಾರ್ಟ್‌ಮೆಂಟಿನ ಸಿ ಬ್ಲಾಕಿನ ಗ್ರೌಂಡ್ ಫ್ಲೋರಿನ ಮನೆ ಬಾಗಿಲಿಗೆ 'ಐ ಯಾಮ್ ಅ ಬಾಡಿ ಡೋನರ್. ವಿಲ್ ಯು ಜಾಯಿನ್ ಮಿ?' ಎಂಬ ಫಲಕ ನೇತಾಡುತ್ತಿದ್ದುದನ್ನು ತಾವೆಲ್ಲ ಅದೆಷ್ಟು ಸಲ ನೋಡಿಲ್ಲ. ಅಪ್ಪ ಎಂದೂ ಅದರ ಬಗ್ಗೆ ಮಾತಾಡದವ ಸದ್ದಿಲ್ಲದೆ ದೇಹದಾನ ಮಾಡುವ ನಿರ್ಧಾರ ಮಾಡಿ ಕಾಗದ ಪತ್ರವನ್ನೂ ತಯಾರು ಮಾಡಿಸಿದ್ದಾನೆಂದರೆ... ಅಪ್ಪಾ ನೀನು ನಿಜಕ್ಕೂ ಗ್ರೇಟ್... ಮಿಹಿರನ ಕಣ್ಣು ಮತ್ತೆ ತುಂಬಿ ಬಂತು. ಅಮ್ಮ ನಿರ್ಲಿಪ್ತಳಾಗಿ ಕುಳಿತೇ ಇದ್ದಳು. ಮಿಹಿರ ಸಾವರಿಸಿಕೊಂಡು ಚಿಕ್ಕಪ್ಪನಿಗೆ ವಿಷಯ ತಿಳಿಸಲು ಮೊಬೈಲೆತ್ತಿದ. ವಿಷಯ ತಿಳಿಸಿ ಫೋನಿಟ್ಟವನೆ ಅಮ್ಮ ಕೊಟ್ಟ ಕವರನ್ನೆತ್ತಿಕೊಂಡು ಲಗುಬಗೆಯಿಂದ ಹೊರಟ. ಮನಸ್ಸು ಅಯೋಮಯವಾಗಿತ್ತು. ಸ್ವಾಭಿಮಾನಿ ಅಪ್ಪನ ಮುಖ ಕಣ್ಮುಂದೆ ತೇಲಿ ನಕ್ಕಿತು.

ಅಪ್ಪನ ಕಣ್ಣೊಳಗೊಂದು ಊರು. ಊರೊಳಗೊಂದು ಸ್ಮಶಾನ ಕಂಡಿತು. ಮಿಹಿರ ಅಕ್ಕಪಕ್ಕದ ವಾಹನಗಳನ್ನೂ ಲೆಕ್ಕಿಸದೆ ತಟ್ಟನೆ ಕಾರಿಗೆ ಬ್ರೇಕ್ ಹಾಕಿದ. ಅಪ್ಪ ನಗುತ್ತಲೇ ಇದ್ದ. ಸ್ಮಶಾನದ ಗೋರಿಗಳೆಲ್ಲ ಮೈಕೊಡವಿಕೊಂಡು ಎದ್ದು ನಿಂತವು. ನೋಡನೋಡುತ್ತಿದ್ದಂತೆಯೇ ಒಂದೊಂದು ಗೋರಿಯೂ ಒಂದೊಂದು ಕಟ್ಟಡವಾಗಿ ಎತ್ತರೆತ್ತರಕ್ಕೆ ಬೆಳೆಯತೊಡಗಿತು. ಒಂದೊಂದು ಕಟ್ಟಡದಲ್ಲೂ ಲೆಕ್ಕವಿಲ್ಲದಷ್ಟು ಕಿಟಕಿ ಬಾಗಿಲುಗಳು... ಮಿಹಿರ ಅವಾಕ್ಕಾಗಿ ನೋಡುತ್ತಲೇ ಇದ್ದ. ಹೌದಲ್ಲ ಅದೋ ಅಲ್ಲಿ ಕಾಣುತ್ತಿರುವುದು ತಾನಿರುವ ಅಪಾರ್ಟ್‌ಮೆಂಟ್! ಅರೇ ಆ ಫ್ಲ್ಯಾಟಿನ ಕಿಟಕಿಯಿಂದ ಅಪ್ಪ ಕಾಣುತ್ತಿದ್ದಾನೆ. ಇದೇನು ಅಪ್ಪ ಹೀಗೆ ಬೆಳೆಯುತ್ತಿದ್ದಾನೆ? ಮಿಹಿರ ಇನ್ನೂ ಕಣ್ಣಗಲಿಸಿದ. ಅಪ್ಪನ ದೇಹ ಕಿಟಕಿಯಿಂದ ಹೊರ ಚಾಚಿ ಬೃಹದಾಕಾರವಾಗಿ ಬೆಳೆಯಲಾರಂಭಿಸಿತು. ಅವನ ಕೈ ಕಾಲು ತಲೆಗೂದಲು ಎಲ್ಲವೂ ಅಕ್ಕ ಪಕ್ಕದ ಫ್ಲ್ಯಾಟು ಕಟ್ಟಡಗಳನ್ನು ಆವರಿಸಿ ಇನ್ನೂ... ಇಡೀ ಊರನ್ನೇ ಆವರಿಸುವಂತೆ ಬೆಳೆಯತೊಡಗಿತು. ಅಪ್ಪನ ಕಣ್ಣುಗಳು ಮಾತ್ರ ಅದೇ ವಾತ್ಸಲ್ಯದಿಂದ ಮಿಹಿರನತ್ತ ನಸು ನಗು ಬೀರುತ್ತಿದ್ದವು.

**ಶುಭಾ ಎ.ಆರ್.**

ಲೇಖಕಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿ. ಕತೆ, ಕವನಗಳನ್ನು ಪ್ರಕಟಿಸುತ್ತ ಬಂದಿರುವ ಅವರು ನಾಟಕಗಳನ್ನು ಕೂಡ ಬರೆದಿದ್ದಾರೆ. ಮಕ್ಕಳಿಗಾಗಿ ಮೂರು ವೈಜ್ಞಾನಿಕ ನಾಟಕಗಳ ಪುಸ್ತಕ 'ಧರೆಯನುಳಿಸುವ ಬನ್ನಿರಿ' ಪ್ರಕಟಿಸಿದ್ದಾರೆ.